# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 05-03-2021 ಪ್ರಶ್ನೆ ಸಂಖ್ಯೆ : 114 (612)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 05-03-2021

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ವಿಷಯ : ಕರ್ನಾಟಕ ರಾಜ್ಯ ರೇಷ್ಮೋದ್ಯಮ ಆಯುಕ್ತರ ಕಚೇರಿಯಲ್ಲಿ 19.89 ಕೋಟಿಗಳ ಅವ್ಯವಹಾರ ಕುರಿತು

(ಅ) ಕರ್ನಾಟಕ ರಾಜ್ಯ ರೇಷ್ಮೋದ್ಯಮ ಆಯುಕ್ತರ ಕಚೇರಿಯಲ್ಲಿ 19.89 ಕೋಟಿ ರೂ.ಗಳ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಮೊತ್ತವು ಬಳಕೆಯಾಗದೆ ಉಳಿತಾಯ ಖಾತೆಯಲ್ಲಿದ್ದರೂ ಭಾರತ ಸರ್ಕಾರಕ್ಕೆ ಬಳಕೆ ಪ್ರಮಾಣ ಪತ್ರವನ್ನು ಯಾವ ಆಧಾರದಲ್ಲಿ ಸಲ್ಲಿಸಲಾಗಿದೆ; ಈ ಕ್ರಮವು ನಿಯಮಬಾಹಿರವಲ್ಲವೆ ; (ವಿವರ ನೀಡುವುದು)

(ಇ) ಬಳಕೆ ಆಗದ ಮೊತ್ತವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡದಿರಲು ಕಾರಣಗಳೇನು ;

(ಈ) ಸರ್ಕಾರದ ನಿಧಿಯನ್ನು ಸ್ವೀಪ್-ಇನ್, ಸ್ವೀಪ್ ಔಟ್ ಖಾತೆಯಲ್ಲಿಡದೆ ಉಳಿತಾಯ ಖಾತೆಯಲ್ಲಿಟ್ಟಿರುವುದರಿಂದ ಆದ ರೂ. 110.76 ಲಕ್ಷಗಳ ನಷ್ಟಕ್ಕೆ ಯಾರು ಹೊಣೆಗಾರರು ; ಈ ನಷ್ಟವನ್ನು ಸಂಬಂಧಿತ ಅಧಿಕಾರಿಯಿಂದಲೇ ವಸೂಲು ಮಾಡಲು ಕೈಗೊಂಡ ಕ್ರಮಗಳೇನು?